**ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ**

**ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ಕೆ ಎಂ ಬಿ ವಕೀಲರಿಂದಃ**

ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು, ನಾನೇ ಹೇಳಿ ಬರೆಸಿದ್ದೇನೆ, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ನಾನು ಈ ಕೆಳಕಂಡ ದಾಖಲೆಗಳನ್ನು ನನ್ನ ಪರವಾಗಿ ನಿಶಾನೆಗಳೆಂದು ಗುರುತಿಸಿಕೊಂಡಿರುತ್ತೇನೆಃ-

ನಿಪಿ-1. ಎಂ ವಿಸಿ 479/2023 ರ ದೃಡೀಕೃತ ನಕಲಿನ ಜಡ್ಜಮೆಂಟ್.

**ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ ಆರ್ ಎನ್ ಪಿ ವಕೀಲರಿಂದಃ**

1. ಎಂ ವಿಸಿ 479/2023 ರಲ್ಲಿ ನಮ್ಮ ಕಂಪನಿಗೆ ನೋಟೀಸ್ ಬಂದಿತ್ತು ಎಂದರೆ ಹೌದು. ಅದರಂತೆ ನಾವು ತಕರಾರು ಕೂಡ ಹಾಕಿರುತ್ತೇವೆ ಎಂದರೆ ಹೌದು. ಪ್ರಮಾಣಪತ್ರದಲ್ಲಿ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ವಾಹನಕ್ಕೆ ಡಿಎಲ್, ಪರ್ಮಿಟ್ , ಎಫ್ ಸಿ ಎಲ್ಲ ಸರಿಯಾಗಿ ಇರುವುದರಿಂದ ನಮ್ಮ ಕಂಪನಿಯೇ ಪರಿಹಾರ ಕೊಡಲು ಬಾದ್ಯಸ್ತರು ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಅಪರ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್.ಸಿ.**
**ನ್ಯಾಯಾಧೀಶರು, ಚಿತ್ರದುರ್ಗ**